ಅಸಲು ದಾವೆ ನಂಃ  298/2023                ಪಿ .ಡಬ್ಲ್ಯೂಃ 1– ರಾಮಪ್ಪ ತಂದೆ ಹನಮಪ್ಪ ಸಾಂತಪ್ಪ

ಸಾಕ್ಷಿಯನ್ನು ಸತ್ಯ ಪ್ರತಿಜ್ಞೆಯ ಮೇರೆಗೆ ಇಂದು ದಿನಾಂಕಃ 28 /02/2026 ರಂದು ಪ್ರಮಾಣೀಕರಿಸಲಾಯಿತು.

**ಪಾಟೀ ಸವಾಲುಃ  2 ನೇ ಪ್ರತಿವಾದಿ ಪರ ವಕೀಲರಾದ ಶ್ರೀ ವಿ.ಡಿ.ಪಿ.ರವರಿಂದಃ**

ನಾನು ಈ ದಾವೆಯನ್ನು ಹಕ್ಕು ಪಡೆದುಕೊಳ್ಳುವ ಸಲುವಾಗಿ ದಾಖಲಿಸಿರುತ್ತೇವೆ. ನಮ್ಮ ವಂಶದ ಮೂಲ ಪುರುಷರಾದ ಫಕೀರಪ್ಪರವರು ನನ್ನ ಅಜ್ಜ. ಸದರಿಯವರಿಗೆ ದೊಡ್ಡ ಹನಮಪ್ಪ , ಹನಮಪ್ಪ , ಶಿವಪ್ಪ ಮತ್ತು ಪರಸಪ್ಪ ಎನ್ನುವ ನಾಲ್ಕು ಜನ ಮಕ್ಕಳು ಎಂದರೆ ಸರಿ . ನಮ್ಮ ಅಜ್ಜನ ಆಸ್ತಿಯನ್ನು ನನ್ನ ತಂದೆಯವರು ಹಾಗೂ ಅವರ ಅಣ್ಣ ತಮ್ಮಂದಿರು ಸೇರಿ ಸುಮಾರು 25–30 ವರ್ಷಗಳ ಹಿಂದೆ ಮಾಡಿಕೊಂಡಿರುತ್ತಾರೆ. ಸದರಿ ಪಾಲುವಿಭಾಗವನ್ನು ನಮ್ಮ ಅಜ್ಜ ಸತ್ತ ನಂತರ ಮಾಡಿಕೊಂಡಿರುತ್ತೇವೆ. ಸದರಿ ಪಾಲುವಿಭಾಗವನ್ನು ಮಾಡಿಕೊಂಡಿರುವ ಬಗ್ಗೆ ಯಾವುದೇ ಲಿಖಿತ ಪತ್ರವನ್ನು ಮಾಡಿಕೊಂಡಿರುವುದಿಲ್ಲ. ನಾನು ಈ ದಾವೆಯನ್ನು ಸರ್ವೆ ನಂ.49 ಮತ್ತು ಸರ್ವೆ ನಂ.3 ಕ್ಕೆ ಸಂಭಂಧಿಸಿದಂತೆ ಮಾಡಿರುತ್ತೇನೆ. ಅವುಗಳ ನಿಖರವಾದ ಸರ್ವೆ ನಂಬರ ನನಗೆ ಗೊತ್ತಿಲ್ಲ. ದಾವಾ ಆಸ್ತಿಗಳ ಚಕಬಂದಿ ನನಗೆ ಹೇಳಲು ಬರುವುದಿಲ್ಲ. ದಾವಾ ಆಸ್ತಿಗಳ ಪಾಲು ವಿಭಾಗದಲ್ಲಿ ದೊಡ್ಡ ಹನಮಪ್ಪರವರಿಗೆ ದಕ್ಷಿಣ ದಿಕ್ಕಿಗೆ ಮತ್ತು ನನ್ನ ತಂದೆಯವರಿಗೆ ಉತ್ತರ ದಿಕ್ಕಿಗೆ ಆಸ್ತಿಗಳು ಬಂದಿರುತ್ತವೆ. ದಾವಾ ಆಸ್ತಿಗಳು ಫಲವತ್ತತೆಯ ಜಮೀನುಗಳು ಆಗಿರುತ್ತವೆ ಎಂದರೆಸರಿ . ದಾವಾ ಆಸ್ತಿಗಳು ಎಕರೆಗೆ 8–10 ಲಕ್ಷ ಬೆಲೆ ಬಾಳುತ್ತವೆ ಎಂದರೆ ಸಾಕ್ಷಿಯು ಇನ್ನೂ ಹೆಚ್ಚು ಮೊತ್ತಕ್ಕೆ ಬೆಲೆ ಬಾಳುತ್ತದೆ ಎಂದು ನುಡಿದಿರುತ್ತಾರೆ. ಫಕೀರಪ್ಪರವರ ಮಕ್ಕಳಾದ ಶಿವಪ್ಪ ಮತ್ತು ಪರಸಪ್ಪರವರು ಬದುಕಿದ್ದಾರಾ ಎಂದು ಕೇಳಲಾದ ಪ್ರಶ್ನೆಗೆ ಪರಸಪ್ಪರವರು ಬದುಕಿದ್ದಾರೆ , ಶಿವಪ್ಪರವರು ನಿಧನರಾಗಿರುತ್ತಾರೆ ಎಂದು ನುಡಿದಿರುತ್ತಾರೆ.ನಾನು ಈ ದಾವೆಯಲ್ಲಿ ಪರಸಪ್ಪರವರನ್ನು ಮತ್ತು ಶಿವಪ್ಪರವರ ವಾರಸುದಾರರನ್ನು ಈ ದಾವೆಯಲ್ಲಿ ಪಕ್ಷಗಾರರನ್ನಾಗಿ ಮಾಡಿರುವುದಿಲ್ಲ ಎಂದರೆ ಸರಿ. ಸಾಕ್ಷಿಯು ಮುಂದುವರೆದು ಅವರು ಈ ದಾವೆಯಲ್ಲಿ ತಮ್ಮ ತಮ್ಮ ಆಸ್ತಿಯನ್ನು ಪಡೆದುಕೊಂಡಿರುತ್ತಾರೆ ಎಂದು ನುಡಿದಿರುತ್ತಾರೆ. ದೊಡ್ಡ ಹನಮಪ್ಪರವರಿಗೆ ಬಸವ್ವ ಮತ್ತು ಪಾರ್ವತವ್ವ ಎಂಬ ಇಬ್ಬರೂ ಹೆಂಡತಿಯರು ಇದ್ದರು ಎಂದರೆ ನನಗೆ ಗೊತ್ತಿಲ್ಲ. ಎರಡನೇ ಪ್ರತಿವಾದಿಯವರ ತಾಯಿ ಪಾರ್ವತವ್ವ ರವರು ದೊಡ್ಡ ಹನುವಪ್ಪರವರ ಮೊದಲನೆಯ ಹೆಂಡತಿ ಎಂದರೆ ನನಗೆ ಗೊತ್ತಿಲ್ಲ. ಎರಡನೇ ಪ್ರತಿವಾದಿಯವರ ತಾಯಿ ಪಾರ್ವತವ್ವ ಎಂದರೆ ಸರಿ. ಪಾರ್ವತವ್ವರವರ ಹೆಸರನ್ನು ನಮ್ಮ ವಂಶಾವಳಿಯಲ್ಲಿ ತೋರಿಸಿರುವುದಿಲ್ಲ ಎಂದರೆ ನನಗೆ ಗೊತ್ತಿಲ್ಲ. ದಾವಾ ಆಸ್ತಿಗಳನ್ನು ಹೊರತು ಪಡಿಸಿ ನಮ್ಮ ಕುಟುಂಬಕ್ಕೆ ಬೇರೆ ಬೇರೆ

ಆಸ್ತಿಗಳು ಇರುವುದಿಲ್ಲ. ಅಬ್ಬಿಗೇರಿ ಗ್ರಾಮದಲ್ಲಿರುವ ವಿಪಸಿ ನಂ.1299/ಎ ಆಸ್ತಿಯು ನಮ್ಮ ಅಣ್ಣನ ಆಸ್ತಿಯಾಗಿರುತ್ತದೆ. ಹಿರೇಮಣ್ಣೂರು ಗ್ರಾಮದ ವಿಪಿಸಿ ನಂ.84/ಎ, 125/ಬಿ, 274/ಎ, 404/1, 404/2, 457 ಆಸ್ತಿಗಳು ನಮ್ಮ ಕುಟುಂಬಕ್ಕೆ ಸೇರಿದ ಆಸ್ತಿಗಳು ಎಂದರೆ ಸರಿ .

**ಮುಂದುವರೆದ ಪಾಟೀ ಸವಾಲುಃ ಕೋರಿಕೆಯ ಮೇರೆಗೆ ಮುಂದೂಡಲಾಯಿತು.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನಕ್ಕೆ ಬೆರಳಚ್ಚು ಮಾಡಲಾಗಿದೆ.)

ಓ.ಹೇ.ಕೇ. ಸರಿ ಅದೆ.

**(ವಿಜಯಕುಮಾರ ಎನ್ )**
ಹೆಚ್ಚುವರಿ ಸಿವಿಲ್ ಹಾಗೂ ಜೆ.ಎಮ್.ಎಫ್.ಸಿ
ನ್ಯಾಯಾಧೀಶರು ರೋಣ